ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ
**Karnataka State Rural Development and Panchayat Raj University**

ರೈತ ಭವನ, ಜನರಲ್‌ಕಾರ್ಯಪ್ಪ ವೃತ್ತ, ಗದಗ– 582 101
RaithaBhavana, General Cariappa Circle, Gadag – 582 101
E-mail: ksrdpruadmissions@gmail.com Phone: 08372-230338, Fax: 08372-297343

---

News about Implementation of National Education Policy-2020 at KSRDPR University is published in Kannada Daily Newspaper Date:30.08.2021



ಪಠ್ಯಪುಸ್ತಕ ರಚನೆಗೂ ಸಿದ್ಧತೆ | ಬೋಧಕ ಸಿಬ್ಬಂದಿಗೆ ಕಾರ್ಯಾಗಾರ

# ಶಿಕ್ಷಣ ನೀತಿ ಜಾರಿಗೆ ಗ್ರಾವಿವಿ ಸಜ್ಜು

• ಅಮರೇಗೌಡ ಗೋನವಾರ

ಹುಬ್ಬಳ್ಳಿ: ರಾಷ್ಟ್ರೀಯ ನೂತನ ಶಿಕ್ಷಣ ನೀತಿಯನ್ನು ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಅನುಷ್ಠಾನ ಮಾಡಲು ಸಜ್ಜಾಗಿರುವ ಗದುಗಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿವಿ ಪಠ್ಯ ರಚನೆ, ಐದು ಪದವಿ ಕೋರ್ಸ್‌ಗಳಿಗೆ ಅಂತಿಮ ರೂಪ, ಬೋಧಕ ಸಿಬ್ಬಂದಿ ತಯಾರು, ಕಾರ್ಯಾಗಾರ, ನಿತ್ಯವೂ ಸಂವಾದ, ಚರ್ಚೆಯೊಂದಿಗೆ ರಾಜ್ಯದ ಇತರೆ ವಿವಿಗಳಿಗೆ ಮಾದರಿಯಾಗುವತ್ತ ಮಹತ್ವದ ಹೆಜ್ಜೆಗಳನ್ನಿರಿಸಿದೆ.

ಶಿಕ್ಷಣ ನೀತಿ ಅಳವಡಿಕೆ ನಿಟ್ಟಿನಲ್ಲಿ ಪಠ್ಯಕ್ರಮ, ಬೋಧನಾ ವಿಧಾನ, ವಿದ್ಯಾರ್ಥಿಗಳ ಮನವೊಲಿಕೆ, ಹೊಸ ಶಿಕ್ಷಣಕ್ಕೆ ಮುಂದಡಿ ಇರಿಸಬೇಕಾದರೆ ಎದುರಾಗುವ ಸಮಸ್ಯೆ, ಸವಾಲುಗಳು ಏನೇನು ಎಂದು ವಿವಿಗಳು ಚಿಂತನೆಯಲ್ಲಿದ್ದವು. ಆದರೆ, ಗ್ರಾಮೀಣಾಭಿವೃದ್ಧಿ ವಿವಿ ಮಾತ್ರ ನೂತನ ಶಿಕ್ಷಣ ನೀತಿ ಅಳವಡಿಸಿಕೊಳ್ಳಲು ತಾನು ಸಿದ್ಧ ಎಂದು ಘೋಷಿಸುವ ಮೂಲಕ ರಾಜ್ಯ-ರಾಷ್ಟ್ರದ ಗಮನ ಸೆಳೆದಿತ್ತು. ಕೇವಲ ಘೋಷಣೆಗೆ ಸೀಮಿತವಾಗದೆ ತಯಾರಿಯೂ ನಡೆಯುತ್ತಿದೆ.

**5 ತಿಂಗಳಿನಿಂದ ಚರ್ಚೆ:** ಮೆಕಾಲೆ ಪ್ರೇರಿತ, ಅಂಕಾಧಾರಿತ ಶಿಕ್ಷಣ ಬದಲು ವೃತ್ತಿ-ಕೌಶಲಾಧಾರಿತ, ಜೀವನಮೌಲ್ಯ ಒಳಗೊಂಡ ಶಿಕ್ಷಣಕ್ಕೆ ಒತ್ತು ನೀಡಿರುವ ಶಿಕ್ಷಣ ನೀತಿ ಅನುಷ್ಠಾನಕ್ಕೆ ರಾಜ್ಯದಲ್ಲಿಯೇ ಮೊದಲ ಹೆಜ್ಜೆ ಇರಿಸಿದ ಗ್ರಾಮೀಣಾಭಿವೃದ್ಧಿ ವಿವಿ ಇದಕ್ಕಾಗಿ ಕಳೆದ 5 ತಿಂಗಳಿಂದಲೇ ತಯಾರಿಯಲ್ಲಿ ತೊಡಗಿದೆ. ಗುಣಮಟ್ಟದೊಂದಿಗೆ ಅನುಷ್ಠಾನಗೊಳಿಸಲು ಕುಲಪತಿ ಸೇರಿದಂತೆ ಕುಲಸಚಿವರು, ವಿವಿಧ ವಿಭಾಗಗಳ ಮುಖ್ಯಸ್ಥರು, ಬೋಧಕರು ಪ್ರತಿ ದಿನ ಸಂಜೆ 2 ಗಂಟೆ ಇದಕ್ಕಾಗಿಯೇ ಮೀಸಲಿಟ್ಟು ಚರ್ಚಿಸುತ್ತಿದ್ದಾರೆ.

▶ 6ನೇ ಪುಟಕ್ಕೆ

> ನೂತನ ನೀತಿ ವಿದ್ಯಾರ್ಥಿಗಳಿಗೆ ಬದುಕಿನ ಮೌಲ್ಯ, ಸಂಸ್ಕಾರ, ಸಂಸ್ಕೃತಿಯ ಮನನ ಮಾಡಲಿದೆ. ಅಗತ್ಯ ಕೌಶಲ ಸೃಷ್ಟಿಸಲಿದೆ. ವಿದ್ಯಾರ್ಥಿಗಳಿಗೆ ಸ್ವಯಂ ಉದ್ಯೋಗ, ಉದ್ಯಮದ ಮನೋಬಲ ನೀಡಲಿದೆ.
>
> • ಪ್ರೊ. ವಿಷ್ಣುಕಾಂತ ಚಟಪಲ್ಲಿ, ಕುಲಪತಿ, ಗ್ರಾವಿವಿ

## ಐದು ಪದವಿ ಕೋರ್ಸ್

ನೂತನ ಶಿಕ್ಷಣ ನೀತಿಯಲ್ಲಿ ವಿದ್ಯಾರ್ಥಿಗಳು 4 ವರ್ಷದ ಪದವಿಯಲ್ಲಿ ಮೊದಲನೇ ವರ್ಷ ಸರ್ಟಿಫಿಕೇಟ್ ಕೋರ್ಸ್, 2ನೇ ವರ್ಷ ಡಿಪ್ಲೊಮಾ, 3ನೇ ವರ್ಷ ಪದವಿ, 4ನೇ ವರ್ಷ ಸಂಶೋಧನಾ ಪದವಿ ಮುಗಿಸಿ, ಐದನೇ ವರ್ಷ ಸ್ನಾತಕೋತ್ತರ ಇಲ್ಲವೇ ನೇರವಾಗಿ ಪಿಎಚ್‌ಡಿಗೆ ಹೋಗಬಹುದು. ಜತೆಗೆ ಬಹು ಆಯ್ಕೆಗೂ ವಿದ್ಯಾರ್ಥಿಗಳಿಗೆ ಅವಕಾಶ ನೀಡಲಾಗುತ್ತದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿವಿ ಈಗಾಗಲೇ 5 ಪದವಿ ಕೋರ್ಸ್‌ಗಳ ಆರಂಭಕ್ಕೆ ಮುಂದಾಗಿದೆ. ಬಿಎ (ಗ್ರಾಮೀಣಾಭಿವೃದ್ಧಿ ಮತ್ತು ಆಡಳಿತ), ಬಿಎ (ಸಾರ್ವಜನಿಕ ಆರೋಗ್ಯ ಮತ್ತು ಸಾಮಾಜಿಕ ಕೆಲಸ), ಬಿಎಸ್ಸಿ (ಅಗ್ರಿಬಿಜಿನೆಸ್ ಮತ್ತು ಆಹಾರ ಸಂಸ್ಕರಣೆ), ಬಿಎಸ್ಸಿ (ಜಿಯೋ ಇನ್‌ಫಾರ್ಮೇಟಿಕ್ಸ್ ಮತ್ತು ಕಂಪ್ಯೂಟರ್ ಸೈನ್ಸ್), ಬಿಕಾಂ (ಇನ್ನೋವೇಶನ್ ಮತ್ತು ಸ್ಟಾರ್ಟ್‌ಅಪ್) ಕೋರ್ಸ್‌ಗಳನ್ನು ಅಂತಿಮಗೊಳಿಸಲಾಗಿದೆ.